ಅ) ಹುಲಸೂರು ಪ್ರಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಳ್ಳಿಖೇಡ (ಬಿ) ಗ್ರಾಮದ ಸ್ಟೇಡಿಯಂ ಇದೆಯೇ?

ಇ) ಹಾಗಿಲ್ಲದಿದ್ದಲ್ಲಿ ಹಳ್ಳಿಖೇಡ(ಬಿ) ಗ್ರಾಮವು ದೊಡ್ಡ ಗ್ರಾಮವಾಗಿದ್ದು ಈ ಭಾಗದ ಯುವಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹೊಸದಾಗಿ ಸ್ಟೇಡಿಯಂನ್ನು ನಿರ್ಮಿಸುವ ಬಗ್ಗೆ ಸರ್ಕಾರವು ಪರಿಶೀಲಿಸುವುದೇ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಬೀದರ್ ನಗರದಲ್ಲಿ ಜಿಲ್ಲಾಮಟ್ಟದ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಕಳೆದ 3 ವರ್ಷಗಳಲ್ಲಿ ಮಂಜೂರಾಗಿರುವ ಕ್ರೀಡಾಂಗಣಗಳ ಹಾಗೂ ವೆಚ್ಚ ಮಾಡಲಾಗಿರುವ ಹಣ.

	1998-99	1999-2000	2000-2001
1)	ಜಿರಾದ್ ಇಲ್ಲಿಯವರೆಗೆ ರೂ. 4.80 ಲಕ್ಷ ವೆಚ್ಚ ಮಾಡಲಾಗಿದೆ.	ಯಾವುದೂ ಇಲ್ಲ	ಯಾವುದೂ ಇಲ್ಲ
2)	ಬಸವಕಲ್ಯಾಣ ಈವರೆಗೂ ಯಾವುದೇ ಹಣ ವೆಚ್ಚ ಮಾಡಿರುವುದಿಲ್ಲ.		

ಆ) ಇಲ್ಲ.

ಇ) ಎಲ್ಲಾ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳು ಪೂರ್ಣಗೊಳ್ಳುವವರೆಗೆ ಮಂಡಲ ಮಟ್ಟದ ಕ್ರೀಡಾಂಗಣ ಕಾಮಗಾರಿ ತೆಗೆದುಕೊಳ್ಳಲು ಬರುವುದಿಲ್ಲ.

ಹುಲ್‌ಸೂರು ಕ್ಷೇತ್ರದ ವ್ಯಾಪ್ತಿಯ ಸಾಯಿಗಾಂವ್‌ನಲ್ಲಿ ನಬಾರ್ಡ್ ನೆರವಿನಿಂದ ಸೇತುವೆ ನಿರ್ಮಿಸುವುದು.

2941(3772)

ಶ್ರೀ ರಾಜೇಂದ್ರ ವರ್ಮ(ಹುಲ್‌ಸೂರ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹುಲಸೂರು ಏಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಾಯಿಗಾಂವ್ ಗ್ರಾಮವು ನೆರೆಯ ಮಹಾರಾಷ್ಟ್ರದ ಗಡಿಭಾಗದಲ್ಲಿದ್ದು ಅಂತರ ರಾಜ್ಯಕ್ಕೆ ಸಂಪರ್ಕವನ್ನು ಕಲ್ಪಿಸುವ ಸಲುವಾಗಿ ಸಾಯಿಗಾಂವ್‌ನಲ್ಲಿ ಸೇತುವ ನಿರ್ಮಾಣ ಕಾರ್ಯವನ್ನು ನಬಾರ್ಡ್ ನೆರವಿನಿಂದ ತೆಗದುಕೊಳ್ಳುವುದಾಗಿ ಕಳದ ಏಧಾನ ಸಭೆಯ ಅಧಿವೇಶನದಲ್ಲಿ ಲೋಕೋಪಯೋಗಿ ಸಚಿವರು ಸದನಕ್ಕೆ ಭರವಸೆಯನ್ನು ನೀಡಿದ್ದುದ್ದು ನಿಜವೇ?

2. ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರ ಈವರೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

3. ಈ ಗ್ರಾಮವು ರಾಜ್ಯದ ಗಡಿಭಾಗದಲ್ಲಿದ್ದು ತೀರ ಹಿಂದುಳಿದ ಪ್ರದೇಶವಾಗಿದ್ದು ಇಲ್ಲಿ ಸೇತುವೆಯನ್ನು ನಿರ್ಮಿಸುವುದರಿಂದ ಅಂತರ ರಾಜ್ಯದ ಸಂಪರ್ಕವನ್ನು ಕಲ್ಪಿಸಲು ಸಹಕಾರಿಯಾಗುವುದರಿಂದ ಪ್ರಸಕ್ತ ಸಾಲಿನಲ್ಲಿ ನಬಾರ್ಡ್ ನೆರವಿನಿಂದ ಈ ಗ್ರಾಮದಲ್ಲಿ ಸೇತುವೆ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗುವುದೆ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಇಲ್ಲ. ಈ ಸೇತುವೆ ಕಾಮಗಾರಿ ರೂ.7.00 ಕೋಟಿಗೆ ಆರ್.ಐ.ಡಿ.ಎಫ್ 6ರಡಿ ಪ್ರಸ್ತಾಪಿತವಾಗಿದ್ದು ಈ ಯೋಜನೆಯಡಿ ಸಚಿವ ಸಂಪುಟ ಉಪ ಸಮಿತಿಯಿಂದ ಗುರುತಿಸಲಾಗಿರುವುದಿಲ್ಲವೆಂದು ಕಳೆದ ಅಧಿವೇಶನದಲ್ಲಿ ಸದನಕ್ಕೆ ತಿಳಿಸಿದ್ದು ಈ ಬಗ್ಗೆ ಯಾವುದೇ ಭರವಸೆ ನೀಡಲಾಗಿರುವುದಿಲ್ಲ.

2. ಈ ಕಾಮಗಾರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುತ್ತದೆ. ಲೋಕೋಪಯೋಗಿ ಇಲಾಖೆಯಡಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

3. ಈ ಬಗ್ಗೆ ಪರಿಶೀಲಿಸಲಾಗುವುದು.

ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ಮಾರಾಟ.

2942(3666)

ಶ್ರೀ ರಾಮಲಿಂಗಾ ರೆಡ್ಡಿ(ಜಯನಗರ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?